ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕ ಮೌಲ್ಯಮಾಪನ / ಆರ್ಥಿಕ ಮೌಲ್ಯಮಾಪನ ಮತ್ತು ದರಸಂಧಾನ ಸಮಿತಿಯ ಮುಂದೆ ದಿನಾಂಕ:18-01-2022 ರಂದು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರ ಕಛೇರಿ ವ್ಯಾಪ್ತಿಯ ದಾಸರಹಳ್ಳಿ ವಿಭಾಗದ ವ್ಯಾಪ್ತಿಗೆ ಸಂಬಂಧಿಸಿದಂತೆ ಮಂಡಿಸಿರುವ ಕಾಮಗಾರಿಯ ಟೆಂಡರ್ ಪ್ರಸ್ತಾವನೆಗೆ ಸಂಬಂಧಿಸಿದ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1.	ಮುಖ್ಯ ಆಯುಕ್ತರು,	: ಅಧ್ಯಕ್ಷರು
2.	ವಿಶೇಷ ಆಯುಕ್ತರು (ಯೋಜನೆ),	: ಸದಸ್ಯರು
3.	ವಿಶೇಷ ಆಯುಕ್ತರು (ಘ.ತ್ಯಾ.ನಿ),	: ಸದಸ್ಯರು
4.	ವಿಶೇಷ ಆಯುಕ್ತರು (ಹಣಕಾಸು),	: ಸದಸ್ಯರು
5.	ಪ್ರಧಾನ ಅಭಿಯಂತರರು,	: ಸದಸ್ಯರು
6.	ಮುಖ್ಯ ಲೆಕ್ಕಾಧಿಕಾರಿಗಳು,	: ಸದಸ್ಯರು
7.	ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ)	: ಸದಸ್ಯ ಕಾರ್ಯದರ್ಶಿ

ಸಭೆಗೆ ಹಾಜರಿದ್ದ ಇತರೆ ಅಧಿಕಾರಿಗಳು:

1 ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ

ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರದ ಆದೇಶ ಸಂಖ್ಯೆ:ನಅಇ 06 ಎಂಎನ್‌ವೈ 2021, ಬೆಂಗಳೂರು, ದಿನಾಂಕ:29.04.2021 ರ ಆದೇಶದಂತೆ ಬೆಂಗಳೂರು ನಗರಕ್ಕೆ ಸೇರ್ಪಡೆಗೊಂಡಿರುವ 110 ಹಳ್ಳಿಗಳ ರಸ್ತೆಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ಪೈಪ್‌ಲೈನ್ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಲು ಅಗೆದಿದ್ದು, ಅಗೆದ ಭಾಗಗಳು ಪುನಶ್ಚೇತನವಾಗಿರದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸದರಿ ರಸ್ತೆಗಳನ್ನು ತುರ್ತಾಗಿ ದುರಸ್ಥಿಗೊಳಿಸಬೇಕಾಗಿರುವುದರಿಂದ ಕ್ರಿಯಾಯೋಜನೆಗೆ ಕೆಲವೊಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಲಾಗಿರುತ್ತದೆ.

ಮುಂದುವರೆದು, ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳ ಯೋಜನೆಯಡಿ ದಾಸರಹಳ್ಳಿ ವಲಯ ವ್ಯಾಪ್ತಿಯ ಕಾಮಗಾರಿಯ ಕ್ರಮ ಸಂಖ್ಯೆ:F268 ರಲ್ಲಿ ರೂ.10.00 ಕೋಟಿ ಮತ್ತು ಕ್ರಮ ಸಂಖ್ಯೆ:F269 ರಲ್ಲಿ ರೂ.08.00 ಕೋಟಿ ಮೊತ್ತದ ಕಾಮಗಾರಿ ಅನುಮೋದನೆಗೊಂಡಿರುತ್ತವೆ.

ಮುಂದುವರೆದಂತೆ, ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಪ್ರಸ್ತಾಪಿತ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಯೋಜನೆಯ ಕಾಮಗಾರಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರು ನೀಡಿರುವ ತಾಂತ್ರಿಕ ವರದಿಯನ್ನು ಪರಿಶೀಲಿಸಿ, ದೃಢೀಕರಿಸಿ, ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯನ್ನು ತಯಾರಿಸಿ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಲಾಗಿದೆ ಎಂದು ಸಮಿತಿಗೆ ತಿಳಿಸಿರುತ್ತಾರೆ.

ಈ ವಿಷಯವಾಗಿ ದಿನಾಂಕ:18-01-2022 ರಂದು ಟೆಂಡರ್ ಮೌಲ್ಯಮಾಪನ ಸಮಿತಿಯು, ಮೌಲ್ಯಮಾಪನಕ್ಕೆ ವಿಷಯ ಪಟ್ಟಿಯ ಯೋಜನೆಗಳ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿತ ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ತಾಂತ್ರಿಕ ವರದಿಯನ್ನು ಪರಿಶೀಲಿಸಿ, ದೃಢೀಕರಿಸಿ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ 2000 ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತಾ, ಇದರನ್ವಯ ಟೆಂಡರ್ ಮೌಲ್ಯಮಾಪನ ವರದಿಯನ್ನು ತಯಾರಿಸಲಾಗಿದೆ ಎಂದು ಸಭೆಗೆ ತಿಳಿಸಿರುತ್ತಾರೆ.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause-3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weight age ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: No.FD 480 Exp-12/2014, Bangalore date: 19-07-2014 Standard tender document KW-4 clause-3.2 (b) ಗೆ ಸಂಬಂಧಿಸಿದಂತೆ ಸಮಾನರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ.50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause 3.2 (c) ಪರಿಗಣಿಸಲಾಗಿದೆ.

ವಿಷಯ ಸಂಖ್ಯೆ:-01

ಅನುಮೋದನೆಗೊಂಡಿರುವ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ ಎಂದು ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ತಿಳಿಸಿರುತ್ತಾರೆ.

NAME OF THE WORK- Restoration and improvements of roads and drains in AYR layout, Shettihalli village, RR Layout of Chikkasandra village and Abbigere village roads dugged by BWSSB to lay the water supply and UGD lines under 110 villages in W.No 12 Shettihalli & Restoration and improvements and drain BTS village, Vishveshwaraiah village, Royal enclave and siddedahalli old village roads dugged by BWSSB to lay water supply and sanitary lineunder 110 villages I W.No 14 Dasarahalli sub division

ಕ್ರ ಸಂ	ಸಂಕ್ಷಿಪ್ತ ವಿವರ	
1	ಅಂದಾಜು ಮೊತ್ತ	ರೂ.1800.00 ಲಕ್ಷಗಳು
2	ದರ ಪಟ್ಟಿ ಅಳವಡಿಕೆ	ಲೋಕೋಪಯೋಗಿ ಇಲಾಖೆಯ 2018–19ನೇ ಸಾಲಿನ ದರಪಟ್ಟಿ ಮತ್ತು ಅನುಮೋದಿತ ದರಗಳು
3	ಲೆಕ್ಕ ಶೀರ್ಷಿಕೆ	2020–21ನೇ ಸಾಲಿನ "110 ಹಳ್ಳಿಗಳ ರಸ್ತೆ ದುರಸ್ಥಿ ಮತ್ತು ಅಭಿವೃದ್ಧಿ" ಸರ್ಕಾರದ ಅನುದಾನದ ಅಡಿಯಲ್ಲಿ
4	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ
5	ಟೆಂಡರ್‌ಗಿಟ್ಟ ಮೊತ್ತ	ರೂ. 15,75,84,338.12
6	ಟೆಂಡರ್ ಪ್ರಕಟಣೆ ಸಂಖ್ಯೆ	BBMP/EE/DD/Ten/15/2021-22, Dated:13/09/2021
7	ದಿನಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ ದಿ.16.09.2021
8	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	28.10.2021 ಮಧ್ಯಾಹ್ನ 4:30 ಗಂಟೆ.
9	ಟೆಂಡರ್ ಪದ್ಧತಿ	ದ್ವಿ ಲಕೋಟೆ ಪದ್ಧತಿ
10	ಉಪಯೋಗಿಸಿದ ಸ್ಟಾಂಡರ್ಡ್ ಬಿಡ್‌ಡಾಕ್ಯುಮೆಂಟ್	KTPP Standard Bid Document KW-04
11	ಇ–ಪ್ರಕ್ಯೂರ್‌ಮೆಂಟ್‌ಇಂಡೆಂಟ್ ಸಂಖ್ಯೆ	BBMP/2021-22/RD/WORK_INDENT48622

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ:29.10.2021 ರಂದು ತೆರೆಯಲಾಗಿದ್ದು ಈ ಕೆಳಕಂಡ ಹದಿನೈದು ಬಿಡ್ದುದಾರರು ಭಾಗವಹಿಸಿರುತ್ತಾರೆ.

SL No	Participate Bidders Names
1	A MOHAN NARASIMHULU (JMC CONSTRUCTIONS PRIVATE LIMITED)
2	ABDUL KALAM AZAD (ABDUL KALAM AZAD)
3	B M Rangegowda (BMRG PROJECTS INDIA PRIVATE LIMITED)
4	C Sonne Gowda (PRASHANTH ROAD INFRAPROJECTS AND DEVELOPERS PRIVATE LIMITED)
5	CHIKKABOREGOWDA KARIGOWDA (CKG CONSTRUCTIONS PRIVATE LIMITED)
6	G CHANDRASHEKAR ( )
7	KYATHAMGERE THAMMANNAGOWDA RAVI (K T R CONSTRUCTIONS)
8	M S VENKATESH (M S V CONSTRUCTIONS COMPANY)
9	P NAGARAJU (YOGAA AND CO)
10	R MAHESWARA NAIDU (RMN Infrastructures Limited)
11	RAMAIAH LOKESH (RAMAIAH LOKESH)
12	RAMESH THAMMANNAGOWDA (Ganapathi Stone Crusher)

SL No	Participate Bidders Names
13	SHESHAGIRI NARAYAN NAYAK (N S Nayak and Sons)
14	SRIRANGAPATNA RAMACHANDRA RAVISHANKAR (CAUVERY ASPHALT AND CONSTRUCTIONS COMPANY)
15	Viswanath K J (KUMBENAHALLY JAVARE GOWDA VISHWANATH)

ಸದರಿ ಯೋಜನೆಯ ಟೆಂಡರ್‌ನಲ್ಲಿ ಹದಿನೈದು ಬಿಡ್ದುದಾರರು ಭಾಗವಹಿಸಿದ್ದು, ಸದರಿ ಬಿಡ್ದುದಾರರ ದಾಖಲಾತಿಗಳನ್ನು ಟೆಂಡರ್‌ನಲ್ಲಿ ವಿಧಿಸಲಾಗಿರುವ ತಾಂತ್ರಿಕ ಷರತ್ತು / ನಿಬಂಧನೆಗಳನ್ವಯ ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಿ ಅದರಲ್ಲಿ ಇಬ್ಬರು ಬಿಡ್ದುದಾರರು ತಾಂತ್ರಿಕವಾಗಿ ಅರ್ಹರಾಗಿರುವುದಾಗಿ ದೃಢೀಕರಿಸಿರುತ್ತಾರೆ. ಅರ್ಹರಾಗಿರುವ ಬಿಡ್ದುದಾರರರಾದ 1).Sri. ABDUL KALAM AZAD and 2.Sri. CHIKKABOREGOWDA KARIGOWDA (CKG CONSTRUCTIONS PRIVATE LIMITED) ರವರ ತಾಂತ್ರಿಕ ಬಿಡ್ ಅನ್ನು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತಾರೆ.

ನಿರ್ಣಯ: ಟೆಂಡರ್ ಮೌಲ್ಯಮಾಪನ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರು ಸದರಿ ಯೋಜನೆಯ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್ದುದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ತಾಂತ್ರಿಕ ಷರತ್ತುಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮಾಡಲಾಗಿ, ಭಾಗವಹಿಸಿರುವ ಬಿಡ್ದುದಾರರ ಪೈಕಿ 1).Sri.ABDUL KALAM AZAD and 2.Sri.CHIKKABOREGOWDA KARIGOWDA (CKG CONSTRUCTIONS PRIVATE LIMITED) ರವರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ ಎಂದು ದೃಢೀಕರಿಸಿ, ಅನುಮೋದನೆಗೆ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಸದರಿ ರವರುಗಳ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ನ್ನು ತೆರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು
ದಾಸರಹಳ್ಳಿ ವಲಯ
(ಸದಸ್ಯ ಕಾರ್ಯದರ್ಶಿ)

ಮುಖ್ಯ ಲೆಕ್ಕಾಧಿಕಾರಿಗಳು
ಬಿ.ಬಿ.ಎಂ.ಪಿ, (ಸದಸ್ಯರು)

ಪ್ರಧಾನ ಅಭಿಯಂತರರು
ಬಿ.ಬಿ.ಎಂ.ಪಿ, (ಸದಸ್ಯರು)

ವಿಶೇಷ ಆಯುಕ್ತರು (ಪಾಲಿಕಾಸು)
ಬಿ.ಬಿ.ಎಂ.ಪಿ, (ಸದಸ್ಯರು)

ವಿಶೇಷ ಆಯುಕ್ತರು (ಘನತ್ಯಾಜ್ಯ)
ಬಿ.ಬಿ.ಎಂ.ಪಿ, (ಸದಸ್ಯರು)

ವಿಶೇಷ ಆಯುಕ್ತರು (ಯೋಜನೆ)
ಬಿ.ಬಿ.ಎಂ.ಪಿ, (ಸದಸ್ಯರು)

ಮುಖ್ಯ ಆಯುಕ್ತರು ಹಾಗೂ ಅಧ್ಯಕ್ಷರು
ತಾಂತ್ರಿಕ ಮೌಲ್ಯಮಾಪನ / ಆರ್ಥಿಕ ಮೌಲ್ಯಮಾಪನ
ಮತ್ತು ದರಸಂಧಾನ ಸಮಿತಿ